ಶ್ರೀ ಎಂ. ವಿ. ರುದ್ರಪ್ಪ — ಸಾ ವಿಂ ಈಗ ಇರತಕ್ಕ ರೂಲ್ಸ್ ಪ್ರಕಾರ ಎರಡು ಸಾವಿರ ಜನಸಂಖ್ಯೆ ಇರತಕ್ಕ ಗ್ರಾಮಕ್ಕೆ ಈ ಎನ್ ಆರ್. ಡಬ್ಲ್ಯೂ ಎಸ್. ಸ್ಕೀಂ ಅನ್ವಯವಾಗುತ್ತದೆ. ಇದನ್ನು ಒಂದು ಸಾವಿರ ಜನಸಂಖ್ಯೆಗೆ ಇಳಿಸಿದರೆ. ಅನೇಕ ಗ್ರಾಮಗಳಿಗೆ ಇಂಡಿಯಾ ಸರ್ಕಾರದವರ ಗ್ರಾಂಟ್ ಮೂಲಕ ಸಹಾಯ ಮಾಡಲು ಅನುಕೂಲವಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ರೂಲ್ಸ್ ಅನ್ನು ಮಾಡಿ ಕೊಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇತ್ತೀಚೆಗೆ ಸರ್ಕಾರ ಘೋಷಣೆ ಮಾಡಿರುವ ರೀತ್ಯ ಪ್ರಜಾ ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ನಾವು ನೀರನ್ನು ಕೊಡುತ್ತಿಲ್ಲ, ಎಲ್ಲರಿಗೂ ನೀರು ಕೊಡತಕ್ಕ ಯೋಜನೆ ಸರ್ಕಾರದ್ದು.

SRI PRABHAKAR TELKAR.—My question is wherever this NRWS Schemes is there, water is given only to that area and not to Harijanwadas and Lambanitandas. As you have stated, there will be one platform, pipes. But what about the people of Harijanwadas and Lambanitandas ? They are not allowed

SRI H. M. CHANNABASAPPA. We put a cluster of pipes and nobody is prevented from taking water, whether he be a Harijan or any community.

SRI PRABHAKAR TELKAR.—Lambanis are far away from villages and they are in good number.

SRI H. M. CHANNABASAPPA.—If any Lambanitandas want NRWS scheme they have to satisfy certain formalities and if they satisfy we will give them.

SRI. PRABHAKAR TELKAR.—In Kodadur and Gundagarthi people are not getting water. In Kodadur the work is completed; Though it is 2 years since it is completed, till today no water is supplied. In every meeting of the District Development Committee we take up this problem and assurance is given by the officers that this scheme will be taken up and completed. But till today it is not supplied.

SRI H.M. CHANNABASAPPA.—According to my information the work is completed. If water is not given there must be some other difficulty or impediment.

ಮಾದಕ ದ್ರವ್ಯಗಳ ಮಾರಾಟದಿಂದ ಬಂದ ಆದಾಯ

೭೭೯. ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ (ಸಿಸಿ) — ಅಬ್ಕಾರಿ ಹಾಗೂ ಕಾರ್ಮಿಕ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.

(ಅ) ೧೯೭೩-೭೪ ೧೯೭೪-೭೫ ಮತ್ತು ೧೯೭೫-೭೬ನೆಯ ಸಾಲಿನಲ್ಲಿ ರಾಜ್ಯಕ್ಕೆ ಅಬಕಾರಿ ಇಲಾಖೆಯಿಂದ ಮಾದಕ ದ್ರವ್ಯಗಳ ಮಾರಾಟದಿಂದ ಬಂದಿರುವ ಆದಾಯವೆಷ್ಟು.

(ಆ) ಮದ್ಯಪಾನ ಮಾದಕ ದ್ರವ್ಯಗಳ ಮಾರಾಟದಲ್ಲಿ ಮೇಲ್ಕಂಡ ಪ್ರತಿ ಸಾಲಿನಲ್ಲೂ (೧) ಹೆಂಡದ ಮಾರಾಟದಿಂದ (೨) ಸಾರಾಯಿ ಮಾರಾಟದಿಂದ (೩) ಬೀರು, ಬ್ರಾಂದಿ, ವಿಸ್ಕಿ, ವೈನ್ ವೈಗರೆ ಮೇಲ್ಕಂಡ ಮಾದಕ ದ್ರವ್ಯಗಳ ಮಾರಾಟದಿಂದ ಸರಕಾರಕ್ಕೆ ಬಂದಿರುವ ಆದಾಯವೆಷ್ಟು?

ಶ್ರೀ ಎಸ್.ಎಂ. ಯಾಹ್ಯಾ —ಅಬ್ಕಾರಿ ಹಾಗೂ ಕಾರ್ಮಿಕ ಮಂತ್ರಿಗಳು).

(ಅ)—

೧೯೭೩–೭೪	೧೯೭೪–೭೫	೧೯೭೫–೭೬*
ರೂ.ಗಳು	ರೂ.ಗಳು	ರೂ.ಗಳು
೩೭,೬೫,೬೬,೧೩೩–೦೦	೪೭,೫೪,೩೯,೫೨೧–೦೦	೪೩,೩೭,೮೪ ೯೫೯–೦೦

(ಆ)—

	೧೯೭೩–೭೪	೧೯೭೪–೭೫	೧೯೭೫–೭೬
	ರೂ.ಗಳು	ರೂ.ಗಳು	ರೂ.ಗಳು
(i) ಹೆಂಡದ ಮಾರಾಟದಿಂದ	೬,೭೬,೧೧,೧೩೧–೦೦	೮,೦೫,೦೩,೫೬೯–೦೦	೭,೮೪,೧೫,೬೧೧–೦೦
(ii) ಸಾರಾಯಿ ಮಾರಾಟದಿಂದ	೨೫,೧೨,೯೩,೭೧೦–೦೦	೩೨,೩೪,೮೯,೩೨೫–೦೦	೨೮,೦೧,೦೦,೮೧೮–೦೦
(iii) ಬೀರು, ಬ್ರಾಂದಿ, ವಿಸ್ಕಿ, ವೈನ್, ವಗೈರೆ ಮೆಲ್ಕಂಡ ಮಾಧಕ ದ್ರವ್ಯಗಳ ಮಾರಾಟದಿಂದ	೪,೮೬,೬೩,೦೦೧–೦೦	೬,೬೦,೫೫,೬೬೫–೦೦	೫.೩೨,೧೪,೩೫೨–೦೦

*೧೯೭೬ನೇ ಜನವರಿ ಅಂತ್ಯದವರೆಗೆ

ಶ್ರೀ ಎಂ.ಎಚ್. ಜಯಪ್ರಕಾಶ್‌ನಾರಾಯಣ್.—ಸ್ವಾಮಿ ಈ ಮಾದಕ ದ್ರವ್ಯಗಳ ಮಾರಾಟದಿಂದ ಆದಾಯ ಬರತಕ್ಕದ್ದರ ಬಗ್ಗೆ ಒಂದು ಪಟ್ಟಿಯನ್ನು ಕೊಟ್ಟಿದ್ದೀರಿ ನಮ್ಮ ರಾಜ್ಯ ಕರ್ನಾಟಕ ಎಂದು ಆಗುವುದಕ್ಕೆ ಮುಂಚೆ ಪಾನನಿರೋಧದ ನೀತಿ ಇತ್ತು. ಮಾನ್ಯ ರಾಮಕೃಷ್ಣ ಹೆಗಡೆಯವರು ಮಂತ್ರಿಗಳಾದಾಗ ಇದು ಒಂದು ಸಡಿಲಿಕೆಯಾಯಿತು. ಸಡಿಲಿಕೆಯನ್ನು ಮಾಡುವಾಗ ಆದಾಯದ ಶೇಕಡ ಹತ್ತು ಭಾಗವನ್ನು ಬಡವರಿಗೂ, ಕುಡುಕರಿಗೂ ಅವರ ಅಭಿವೃದ್ಧಿಗಾಗಿ ಅವರ ಶೈಕ್ಷಣಿಕ ಸಾಮಾಜಿಕ ಅಭಿವೃದ್ಧಿಗಾಗಿ ದುಡ್ಡನ್ನು ಪೆಚ್ಚ ಮಾಡುತ್ತೇವೆ ಎನ್ನುವ ಆಭಯವನ್ನು ಕೊಟ್ಟಿದ್ದರು ಅದನ್ನೇನಾದರೂ ಜಾರಿಗೆ ತಂದಿದ್ದೀರಾ? ಈ ಹಣದಲ್ಲಿ ಎಷ್ಟು ಹಣ ವಿರ್ಜಾಗಿದೆ, ಎನ್ನುವುದನ್ನು ದಯವಿಟ್ಟು ಹೇಳುತ್ತೀರಾ?

† ಶ್ರೀ ಎಸ್ ಎಂ ಯಾಹ್ಯಾ.—ಆ ಪಟ್ಟಿಯಲ್ಲಿ ಲೇಟೆಸ್ಟ್ ಫಿಗರ್ಸ್‌ಕೊಟ್ಟಿದ್ದೇವೆ. ಮಾರ್ಚ್ ತಿಂಗಳವರೆಗೆ, ೫೧ ೯೮,೮೪,೨೨೯ ರೂಪಾಯಿಗಳ ಆದಾಯ ಬಂದಿದೆ. ಈ ಆದಾಯವನ್ನು ಹೆಚ್ಚಾಗಿ ಜನಸಾಮಾನ್ಯರ ಕಲ್ಯಾಣಕ್ಕಾಗಿ ಉಪಯೋಗಿಸುತ್ತಿದ್ದೇವೆ ಆ ಕೆಲಸ ಈ ಕೆಲಸ ಎಂದು ನಿರ್ದಿಷ್ಟವಾಗಿ ಉಪಯೋಗಿಸುತ್ತಿಲ್ಲ. ಈ ಎಲ್ಲಾ ಹಣ ಸರ್ಕಾರದ ಟ್ರೆಷರಿಗೆ ಹೋಗಿ, ಆಲ್ಲಿಂದ ಎಲ್ಲಾ ಡೆವಲಪ್‌ಮೆಂಟ್ ವರ್ಕ್ಸ್‌ಗೆ ಹೋಗುತ್ತದೆ.

SRI M.H. JAYAPRAKASH NARAYAN.—Sri Ramakrishna Hegde had assured this House that 10% of the amount coming under this head will be utilised for the welfare of Scheduled Castes, Scheduled Tribes and other weaker sections of the society who are addicted to such drinks May I know whether this assurance has been implemented or not?

SRI S.M YAHYA.—The hon member has brought to my notice. If there is any such resolution I will study and see what best can be done.

ಶ್ರೀ ಜೆ. ಎಲ್. ಕಬಾಡಿ —ಈ ಮಾದಕ ದ್ರವ್ಯಗಳ ಅಂಗಡಿಗಳು ಎಷ್ಟು ಇವೆ, ಇವು ಹರಿಜನ ಕೇರಿಗಳಲ್ಲಿ, ಮತ್ತು ಗುಡಿಗಳ ಹತ್ತಿರ, ಶಾಲೆ ವಗೈರೆಗಳ ಹತ್ತಿರದಿಂದ ದೂರ ಇರಬೇಕು ಎಂದು ಸರ್ಕಾರದ ಆಜ್ಞೆ ಇದ್ದರೂ ಇದುವರೆಗೂ ಸಹ ಇವುಗಳ ಹತ್ತಿರದಲ್ಲಿಯೇ ಈ ಅಂಗಡಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ಎಂ. ಯಾಹ್ಯಾ.—ಸರ್ಕಾರದಿಂದ ಆಬ್ಜೆಕ್ಷನಬಲ್ ಪ್ಲೇಸಸ್ ಯಾವುವು ಇವೆಯೋ ಆಂಥ ಕಡೆ ಈ ಅಂಗಡಿಗಳನ್ನು ತೆಗೆಯಬೇಕು ಎಂದು ನಾವು ಜಿಲ್ಲಾಧಿಕಾರಿಗಳಿಗೆ ಆಜ್ಞೆಯನ್ನು ಕೊಟ್ಟಿದ್ದೇವೆ ಬಹಳಷ್ಟು ಕಡೆ ಅಂಗಡಿಗಳನ್ನು ತೆಗೆದುಬಿಟ್ಟಿದ್ದಾರೆ. ಕೆಲವು ಕಡೆಗಳಲ್ಲಿ ಇನ್ನೂ ನಡೆಸುತ್ತಿದ್ದಾರೆ.

ಶ್ರೀ ಟಿ.ಎಂ. ಮಂಜುನಾಥ.—ಹೆಂಡ ಸಾರಾಯಿ ಕುಡಿಯತಕ್ಕವರು ಸಾಮಾನ್ಯವಾಗಿ ಬಡವರು. ಬೀರು ಬ್ರಾಂದಿ ಕುಡಿಯತಕ್ಕವರು ಶ್ರೀಮಂತರು. ಶ್ರೀಮಂತರು ಕುಡಿಯುವ ದ್ರವ್ಯಗಳ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಿ ಬಡವರಿಗೆ ತೆರಿಗೆ ರಹಿತ ದ್ರವ್ಯವನ್ನು ಕುಡಿಯುವಂತೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಸ್. ಎಂ. ಯಾಹ್ಯಾ — ಕುಡಿಯುವುದರಲ್ಲಿ ಶ್ರೀಮಂತರು, ಬಡವರು ಎಂದು ಇಲ್ಲ. ಕುಡಿಯುವವರು ಎಲ್ಲಾ ರೀತಿಯಲ್ಲಿಯೂ ಕುಡಿಯುತ್ತಾರೆ. ಮಾನ್ಯ ಸದಸ್ಯರು ಸಲಹೆಯಿಂದ ಏನಾದರೂ ಹೆಚ್ಚಿನ ಆದಾಯ ಸರ್ಕಾರಕ್ಕೆ ಬರುವುದಾದರೆ ಅದನ್ನು ಖಂಡಿತವಾಗಿಯೂ ಯೋಚನೆ ಮಾಡುತ್ತೇವೆ.

SRI J.P. SARWESH.—By the sale of toddy the Government is getting Rs. 6 to 8 crores. Actually toddy is not sold Chloro hydrate chemical which goes in the preparation of dangerous drugs is given to the people. Will the Government see it is stopped?

SRI S.M YAHYA.—This menace is there chloro hydrate mixture. In fact there are one or two cases. Recently we found that chloro hydrate worth a few lakhs was transported to Karnataka. The Government is taking every step in this matter and we will sternly act and take action against those persons. In fact we have prosecuted one and there are about 20 cases pending in this regard.

1-30 P.M.

ಶ್ರೀ ಎಂ ಎಚ್. ಜಯಪ್ರಕಾಶ್ ನಾರಾಯಣ.—ಪಾನನಿರೋಧವನ್ನು ಸತಿಲಿಕೆ ಮಾಡಿದ್ದರಿಂದ ಬಡವರು, ಕೂಲಿಗಾರರು ಮತ್ತು ಪರಿಶಿಷ್ಟ ವರ್ಗದವರು ಸ್ವರಾಜ್ಯ ಬಂದಂದಿನಿಂದ ಇಪ್ಪತ್ತು ವರ್ಷ ವಂದುವರೆದಿದ್ದವರು ಇವತ್ತು ಇಪ್ಪತ್ತು ವರ್ಷ ವರ್ಷ ಹಿಂದಕ್ಕೆ ಹೋಗಿದ್ದಾರೆ. ಪಾನ ನಿರೋಧದ ವಿಚಾರದಲ್ಲಿ, ಕೇಂದ್ರ ಸರ್ಕಾರವು ೧೨ ಂಶಗಳ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂದು ಇದೆ. ಮತ್ತು ರಾಜ್ಯ ಸರ್ಕಾರದವರು ಈ ಬಗ್ಗೆ ಒಂದು ಪ್ರಾಹಿಬಿಷನ್ ಬೋರ್ಡ್ ಎಂದು ಮಾಡಿದ್ದಾರೆ. ಪಾನ ನಿರೋಧವನ್ನು ಸಡಿಲ ಮಾಡಬೇಕೆಂದು ಸರ್ಕಾರದ ನೀತಿಯಿರುವುದರಿಂದ, ಮತ್ತು ಮದ್ಯಪಾನ ದಿಂದ ಬಡವರಿಗೆ ತೊಂದರೆಯಾಗುತ್ತಿರುವುದರಿಂದ ಆದನ್ನು ತಪ್ಪಿಸಲು, ಪ್ರಾಹಿಬಿಷನ್ ಬೋರ್ಡಿಗೆ ಐದು ಪರ್ಸೆಂಟ್ ಹಣವನ್ನು ಹೆಚ್ಚಿಗೆ ಕೊಟ್ಟು ಹೆಚ್ಚು ಹೆಚ್ಚು ಪ್ರಚಾರ ಮಾಡುವಂತೆ ಮಾಡುವುದಕ್ಕೆ ಮಾನ್ಯ ಮಂತ್ರಿಗಳು ವ್ಯವಸ್ಥೆ ಮಾಡುವರೆ?

ಶ್ರೀ ಎಸ್. ಎಂ. ಯಾಹ್ಯಾ.—ಪ್ರಾಹಿಬಿಷನ್ ಬೋರ್ಡನ್ನು ಸರ್ಕಾರ ಈಗತಾನೇ ರಚನೆ ಮಾಡಿದೆ. ಆ ಬೋರ್ಡಿನವರು ಒಂದು ಉತ್ತಮ ವಾತಾವರಣವನ್ನು ಉಂಟು ಮಾಡಿ ಕೊನೆಗೆ ಪಾನ ನಿರೋಧವನ್ನು ಜಾರಿಗೆ ತರುವ ರೀತಿಯಲ್ಲಿ ಕಷ್ಟಪಡಬೇಕಾಗುತ್ತದೆ. ಪ್ರಾಹಿಬಿಷನ್ ಬೋರ್ಡಾಗಲೀ ಅಥವಾ ೧೨ ಅಂಶದ ಕಾರ್ಯಕ್ರಮಗಳಾಗಲೀ—ಇವೆಲ್ಲಾ ಪಾನ ನಿರೋಧವನ್ನು ಕಾಲ ಕ್ರಮೇಣ ಜಾರಿಗೆ ತರುವುದಕ್ಕೆ

ಮೊದಲ ಹೆಜ್ಜೆ. ಇನ್ನು ಅವರಿಗೆ ಹಣ ಕೊಡುವ ವಿಚಾರದಲ್ಲಿ, ಪ್ರಾಹಿಬಿಷನ್ ಬೋರ್ಡಿನವರು ಎಷ್ಟು ಹಣ ಬೇಕು ಎಂದು ಕೇಳುತ್ತಾರೆ, ಸರ್ಕಾರದವರು ಅಷ್ಟನ್ನು ಕೊಡುತ್ತಾರೆ. ಮತ್ತೆ ಬೇಕಾದರೆ ಕೊಡುತ್ತೇವೆ. ಅದು ಬಿಟ್ಟು, ಅವರು ಖರ್ಚು ಮಾಡದೇ ಇದ್ದರೆ, ನಾವು ಹಣ ಕೊಡುವುದರಿಂದ ಏನೂ ಪ್ರಯೋಜನವಿಲ್ಲ. ಆದುದರಿಂದ, ಅಷ್ಟು ಪರ್ಸೆಂಟ್ ಕೊಡಿ, ಇಷ್ಟು ಪರ್ಸೆಂಟ್ ಕೊಡಿ ಎನ್ನುವುದು ಸರಿಯಲ್ಲ.

ಶ್ರೀ ಸಿ. ಬೈರೇಗೌಡ —ಇವತ್ತಿನ ದಿವಸ ಕಲಬೆರಕೆ ಸಾಮಾನ್ಯವಾಗಿ ಎಲ್ಲ ಕಡೆ ಯಥೇಚ್ಛವಾಗಿ ನಡೆಯುತ್ತಿದೆ. ಮಾನ್ಯ ಮಂತ್ರಿಗಳು ಉತ್ತರ ನೀಡುತಾ , ಮದ್ಯಪಾನದಲ್ಲಿ ಕಲಬೆರಕೆ ಮಾಡುವವರ ವಿರುದ್ಧ ಕೇಸುಗಳನ್ನು ಬುಕ್ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಆದರೂ ಅದು ಸಂಪರ್ಕ ವಾಗಿಲ್ಲ ಆದುದರಿಂದ, ಇದರ ಬಗ್ಗೆ ಒಂದು ವಿಶೇಷ ದಳವನ್ನು ವ್ಯವಸ್ಥೆ ಮಾಡಿ, ಆದಷ್ಟು ಜಾಗ್ರತೆ ಕಲಬೆರಕೆಯನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುವರೆ?

ಶ್ರೀ ಎಸ್. ಎಂ ಯಾಹ್ಯಾ —ಈ ದಿಶೆಯಲ್ಲಿ ಸರ್ಕಾರದ ಪ್ರಯತ್ನವಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಅಧಿಕಾರಿಗಳಿಗೆ ಆಜ್ಞೆಗಳನ್ನು ಕಳುಹಿಸಿದ್ದೇವೆ. ಪ್ರತಿಯೊಬ್ಬ ಸೂಪರಿಂಟೆಂಡೆಂಟ್ ಮತ್ತು ಇನ್‌ಸ್ಪೆಕ್ಟರು ವಾರಕ್ಕೆ ಒಂದು ಸಲವಾದರೂ ಡಿಥೀರಿ ಭೇಟಿ ಕೊಟ್ಟು ತನಿಖೆ ಮಾಡಬೇಕೆ ದು ತಿಳಿಸಲಾಗಿದೆ.

ಶ್ರೀ ಎಂ. ಎಚ್. ಜಯತ್ಕಾಶ್ ನಾರಾಯಣ —ಆಂಧ್ರ ಸರ್ಕಾರದವರು ಮದ್ಯಪಾನವನ್ನು ಷಾಪ್‌ವೈಸ್ ಹರಾಜು ಹಾಕಿದ್ದರಿಂದ ಒಟ್ಟು ವರಮಾನ ಜಾಸ್ತಿ ಬಂದಿರುತ್ತೆ. ಆದೇ ರೀತಿ, ನಮ್ಮ ಸರ್ಕಾರದವರೂ ಸಹ, ಷಾಪ್‌ವೈಸ್ ಹರಾಜು ಮಾಡಿದರೆ ಹೆಚ್ಚು ವರಮಾನ ಬರುತ್ತದೆ. ಆದು ದರಿಂದ, ಈ ನೀತಿಯನ್ನು ಮಾನ್ಯ ಮಂತ್ರಿಗಳು ಜಾರಿಗೆ ತರುವರೆ?

ಶ್ರೀ ಎಸ್. ಎಂ ಯಾಹ್ಯಾ.—ನಾವೂ ಸಹ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಷಾಪ್‌ವೈಸ್ ಹರಾಜನ್ನು ಮಾಡಿದ್ದೇವೆ. ಷಾಪ್‌ವೈಸ್ ಹರಾಜು ಆಗುವುದರಿಂದ ವರಮಾನ ಹೆಚ್ಚು ಬರುತ್ತದೆ ಎನ್ನುವ ಅಭಿಪ್ರಾಯ ತಪ್ಪು. ಏಕೆಂದರೆ ಒಂದೊಂದು ತಾಲ್ಲೂಕಿನಲ್ಲಿ ಸಾವಿರಾರು ಷಾಪುಗಳು ಇರುತ್ತವೆ. ಅವುಗಳಗೆಲ್ಲಾ ಪ್ರತ್ಯೇಕವಾದ ಆಡಳಿತ ಮತ್ತು ಹರಾಜು ಇಟ್ಟುಕೊಳ್ಳುವುದು ಕಷ್ಟವಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಟ್ಯಾಪರ್ಸ್ ೧೦ ಲಕ್ಷಕ್ಕೂ ಹೆಚ್ಚು ಇದ್ದಾರೆ. ಇವರೇ ಆಲ್ಲಿ ಓನರ್ ಆಗಿದ್ದಾರೆ. ಆದಕ್ಕಾಗಿ ಆಲ್ಲಿ ಷಾಪ್‌ವೈಸ್ ಹರಾಜು ಮಾಡುವುದರಿಂದ ವರಮಾನ ಹೆಚ್ಚು ಬರುತ್ತದೆ. ಆದರೆ ಆದೇ ಪದ್ಧತಿಯನ್ನು ಬೇರೆ ಕಡೆ ಮಾಡುವುದಕ್ಕೆ ಹಲವಾರು ಕಂಡಿಷನ್ಸ್ ಇರುತ್ತವೆ. ಷಾಪ್‌ವೈಸ್ ತೊಂದರೆ ಇದ್ದರೆ ಅದನ್ನು ಗ್ರೂಪ್‌ವೈಸ್ ಮಾಡುತ್ತೇವೆ. ಗ್ರೂಪ್‌ವೈಸ್ ತೊಂದರೆ ಇದ್ದರೆ ಅದನ್ನು ತಾಲ್ಲೂಕು ವೈಸ್ ಮಾಡುತ್ತೇವೆ. ಒಂದು ವೇಳೆ ತಾಲ್ಲೂಕು ವೈಸ್‌ಲ್ಲೂ ತೊಂದರೆ ಇದ್ದರೆ; ಆಗ ಡಿಸ್ಟ್ರಿಕ್ಟ್‌ವೈಸ್ ಮಾಡುತ್ತೇವೆ ನಮ್ಮ ಮೊಟ್ಟ ಮೊದಲನೆಯ ಉದ್ದೇಶ ಹೆಚ್ಚು ವರಮಾನ ಪಡೆಯುವುದೇ ಆಗಿದೆ ಹೆಚ್ಚು ವರಮಾನ ಪಡೆಯುವ ಉದ್ದೇಶದಿಂದ ನಾವು ಇದನ್ನು ಬಿಸಿನೆಸ್ ರೀತಿ ಕೆಲಸ ಮಾಡುತ್ತೇವೆ.

Departments of Urology, Plastic Surgry, etc., in all post-graduate medical colleges.

7. 9. Sri J. P. Sarwasi (Sedam).—Will the Minister for Health be pleased to state —

(*a*) whether according to the Indian Medical Council requirement, there should be different Surgical Specialist Departments such as Urology, Plastic surgery etc., in all the Post-graduate Teaching Colleges except in Bangalore;

(*b*) if so, why such units are not started in Mysore, Hubli Medical Colleges through Specialists are available to serve?